ಅ) ಈ ಅಧ್ಯಯನ ಸಮಿತಿಯ ತಜ್ಞರ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆಯೇ?

ಇ) ಈ ಅಧ್ಯಯನ ಸಮಿತಿಯ ವರದಿಯ ಆಧಾರದಲ್ಲಿ ಸರ್ಕಾರ ಯಾವ ಯಾವ ಯೋಜನೆಗಳನ್ನು ಹಮ್ಮಿಕೊಂಡಿದೆ?

ಶ್ರೀ ಪಿ.ಸಿ. ಸಿದ್ದನಗೌಡರ್ (ಸಕ್ಕರೆ, ಜವಳಿ, ವಿಜ್ಞಾನ ಮತ್ತು ತಂತ್ರಜ್ಞಾನ, ಪರಿಸರ ಮತ್ತು ಜೀವಿಶಾಸ್ತ್ರ ರಾಜ್ಯ ಸಚಿವರು) :

ಅ) ಹೌದು

ಆ) ಹೌದು

ಇ) ವರದಿಯ ಶಿಫಾರಸ್ಸುಗಳು ಸರ್ಕಾರದ ಪರಿಶೀಲನೆಯಲ್ಲಿದೆ.

ಮೈಸೂರು ನಗರದಲ್ಲಿರುವ ಕುಡಿಯುವ ನೀರಿನ ಸಮಸ್ಯೆ

184 - ಶ್ರೀ ಇ. ಮಾರುತಿ ರಾವ್ ಪವಾರ್ (ನರಸಿಂಹರಾಜ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ನರಸಿಂಹರಾಜ ಕ್ಷೇತ್ರದಲ್ಲಿರುವ ಸಿದ್ಧಾರ್ಥನಗರ, ಉದಯಗಿರಿ, ನಜರ್‌ಬಾದ್ ಬಡಾವಣೆಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿದ್ದು ಇದರ ಪರಿಹಾರಕ್ಕೆ ನಗರದ ಕೆ.ಆರ್. ವೃತ್ತದಿಂದ ಸಯ್ಯಾಜಿರಾವ್ ರಸ್ತೆಯ ಮೂಲಕ ನೀರಿನ ಪೈಪುಗಳನ್ನು ಅಳವಡಿಸಲು 1991ರಲ್ಲಿ ಕೆಲಸ ಪ್ರಾರಂಭಿಸಲು ಗುತ್ತಿಗೆ ನೀಡಿರುವುದು ನಿಜವೇ?

ಆ) ಹಾಗಿದ್ದಲ್ಲಿ ತಕ್ಷಣ ಪ್ರಾರಂಭಿಸಲು ತಾವು ತೆಗೆದುಕೊಂಡಿರುವ ಕ್ರಮವೇನು? ಈ ವಿಷಯ ಯಾವ ಹಂತದಲ್ಲಿದೆ?

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಹೌದು, ನಿಜ

ಆ) ಸದರಿ ಕೆಲಸದಲ್ಲಿ ಒಟ್ಟು 800 ಮಿ.ಮೀ. ವ್ಯಾಸದ 4810 ಮೀ. ಪಿ.ಎಸ್.ಸಿ. ಕೊಳವೆ ಅಳವಡಿಸಬೇಕಿದ್ದು ಇದುವರೆಗೆ ಒಟ್ಟು 4520 ಮಿ. ಕೊಳವೆಗಳನ್ನು ಟೌನ್‌ಹಾಲಿನಿಂದ ಜರ್ಮನ್ ಪ್ರೆಸ್‌ವರೆಗೆ ಹಾಕಲಾಗಿದೆ, ಉಳಿದ 290 ಮಿ. ಉದ್ದದ ಕೊಳವೆಗಳನ್ನು ಹೆಚ್ಚು ವಾಹನ ಸಂಚಾರವಿರುವ ಕೆ.ಆರ್. ವೃತ್ತದ ಬಳಿ ಹಾಕಬೇಕಾಗಿದ್ದ ಪಿ.ಎಸ್.ಸಿ. ಬದಲು ಉಕ್ಕಿನ ಕೊಳವೆ ಅಳವಡಿಸಲು ತೆಗೆದುಕೊಳ್ಳಲಾಗುತ್ತಿದೆ.

ಉಡುಪಿ ತಾಲ್ಲೂಕು ನೆಂಜಾರು ಗ್ರಾಮದಲ್ಲಿ ಅಕ್ರಮ ಗಣಿಗಾರಿಕೆ

172 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ನೆಂಜಾರು ಗ್ರಾಮದಲ್ಲಿ ಅಕ್ರಮವಾಗಿ ಗ್ರಾನೈಟ್‌ನ್ನು ಲೂಟಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಈ ಅಕ್ರಮಕ್ಕೆ ಕಾರಣರಾದವರ ಮೇಲೆ ನಿರ್ದಿಪ್ತ ಧೋರಣೆ ತಳೆದ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಸರ್ಕಾರದವರು ಶಿಸ್ತಿನ ಕ್ರಮ ಕೈಗೊಳ್ಳುವರೇ?

ಶ್ರೀ ಎಸ್.ಡಿ. ಜಯರಾಂ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.